**ಇಂದು ದಿನಾಂಕ: 27.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಜೆ.ಎಸ್.ಎನ್. ವಕೀಲರಿಂದಃ**

ನನ್ನ ತಂದೆಗೆ 6 ಜನ ಮಕ್ಕಳು, ಅವರೆಂದರೆ ನಾನು ತಿಮ್ಮಪ್ಪ, ಅಣ್ಣಯ್ಯ, ನಿಂಗಣ್ಣ, ಶಿವಣ್ಣ, ರೇಣುಕಾ ಮತ್ತು ರಾಮಕೃಷ್ಣ. ನಮ್ಮ ನಡುವೆ ನೊಂದಣಿ ವಿಭಾಗ ಆಗಿರುವುದಿಲ್ಲ. ದಾವಾ ಆಸ್ತಿಗಳ ಆರ್.ಟಿ.ಸಿ.,ಗಳೆಲ್ಲವೂ ನಮ್ಮ ತಂದೆಯ ಹೆಸರಿನಲ್ಲಿವೆ ಎಂದರೆ ಸರಿ. ನನ್ನ ತಂದೆ ದಿನಾಂಕ 19.08.2025 ರಂದು ತೀರಿಕೊಂಡಿದ್ದಾರೆ. ಅವರು ತೀರಿಕೊಂಡ ನಂತರ ಪೌತಿ ಖಾತೆ ಮಾಡಿಸಿಕೊಳ್ಳಲು ಅರ್ಜಿ ಕೊಟ್ಟಿಲ್ಲ.

ನಮ್ಮ ತಾತನಿಂದ ನಮ್ಮ ತಂದೆಗೆ 10 ಎಕರೆ ಜಮೀನು ಬಂದಿರಬಹುದು. ನನ್ನ ತಂದೆಯ ಹೆಸರಿನಲ್ಲಿ 16X16 ಅಡಿ ಅಳತೆಯ ತಂಬಾಕು ಬ್ಯಾರನ್ ಗೆ ಲೈಸೆನ್ಸ ಇತ್ತು ಅದೇ ಲೈಸೆನ್ಸಗೆ ನನ್ನ ತಂದೆ ತಂಬಾಕು ಮಾರಾಟ ಮಾಡುತ್ತಿದ್ದರು. ತಂಬಾಕು ಮಾರಾಟದಿಂದ ಬಂದ ಹಣ ನನ್ನ ತಂದೆಯ ಬ್ಯಾಂಕ್ ಖಾತೆಗೆ ಹೋಗುತ್ತಿತ್ತು ಎಂದರೆ ಸರಿ. ಮರೂರು ಗ್ರಾಮದಲ್ಲಿ ನನ್ನ ತಂದೆ ತಾಯಿ ಹೆಸರಿನಲ್ಲಿ ಸ್ವತ್ತು ಇತ್ತು. ಮರೂರು ಗ್ರಾಮದಲ್ಲಿ ಆಸ್ತಿ ಇತ್ತು ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿದ್ದೇನೆ.

ಹುಣಸೂರು ತಾಲ್ಲೂಕು, ಗಾವಡಗೆರೆ ಹೋಬಳಿ, ಮರೂರು ಗ್ರಾಮದ ಸ.ನಂ.308/2, 212/2, 218/2, 218/9, 218/7, 218/12 ಮತ್ತು 227/2 ನನ್ನ ತಂದೆ ತಾಯಿಯ ಹೆಸರಿನಲ್ಲಿತ್ತು ಎಂದರೆ ಸರಿ. ನಿ.ಪಿ–9 ರಲ್ಲಿ ಗುರುತಿಸಿರುವ ವಿಲ್ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿಲ್ಲ. ವಿಲ್ ಬಗ್ಗೆ ಲಿಖಿತ ಹೇಳಿಕೆಯಲ್ಲಿ ಬರೆಸಲು ತೊಂದರೆ ಇತ್ತೆ ಎಂದರೆ ನನ್ನ ತಂದೆ ವಿಲ್ ಬರೆಸಿರುವುದು ಗೊತ್ತಿರಲಿಲ್ಲ ಅವರು ತೀರಿಕೊಂಡ ನಂತರ ಗೊತ್ತಾಯಿತು. ದಾವೆ

ನಡೆಯುತ್ತಿದ್ದಾಗಲೇ ದಾವಾ ಐಟಂ ನಂಬರ್ 1, 3, 4 ಮತ್ತು 6 ರ ಆಸ್ತಿಗಳಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಮತ್ತು ಮೇಲೆ ಹೇಳಿದ ಮರೂರು ಗ್ರಾಮದಲ್ಲಿರುವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ ನಮ್ಮ ತಾಯಿಗೆ ಅವರ ತವರು ಮನೆಯವರು ಅರಿಶಿಣ ಕುಂಕುಮಕ್ಕಾಗಿ ಕೊಟ್ಟಿದ್ದರು. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿಲ್ಲ. ದಾವಾ ಐಟಂ ನಂಬರ್ 8 ರಿಂದ 16 ರ ಆಸ್ತಿಗಳನ್ನು ನಾವು ಮತ್ತು ನನ್ನ ತಂದೆ ದುಡಿದ ಹಣದಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ ನನ್ನ ವೇತನದ ಹಣದಿಂದ ಖರೀದಿಸಿದ್ದೇನೆ. ಸದರಿ ಆಸ್ತಿಗಳನ್ನು ನಿಮ್ಮ ಹೆಸರಿನಲ್ಲಿಯೇ ಖರೀದಿಸಲು ತೊಂದರೆ ಇತ್ತೆ ಎಂದರೆ ಆಸ್ತಿಗಳನ್ನು ಖರೀದಿಸಬೇಕೆಂದರೆ ನನ್ನ ಹೆಸರಿನಲ್ಲಿ ಆರ್.ಟಿ.ಸಿ., ಇರಬೇಕಾಗಿತ್ತು ಆದರೆ ನನ್ನ ಹೆಸರಿನಲ್ಲಿ ಆರ್.ಟಿ.ಸಿ., ಇರಲಿಲ್ಲ ಆ ಕಾರಣದಿಂದ ನನ್ನ ಹೆಸರಿನಲ್ಲಿ ಖರೀದಿಸಿಲ್ಲ.

ನನ್ನ ವೇತನ ನನ್ನ ಜೀವನಕ್ಕೆ ಸಾಕಾಗುತ್ತಿರಲಿಲ್ಲ, ಆದ್ದರಿಂದ ದಾವಾ ಐಟಂ ನಂಬರ್ 8 ರಿಂದ 16 ರ ಆಸ್ತಿಗಳನ್ನು ಒಟ್ಟು ಕುಟುಂಬದ ದುಡಿಮೆಯಿಂದ ಖರೀದಿಸಲಾಗಿದೆ ಎಂದರೆ ಸುಳ್ಳು. ನಾನು ನೌಕರಿಯಲ್ಲಿದ್ದಾಗ ಮೈಸೂರಿನ ಪೊಲೀಸ್ ವಸತಿ ಗೃಹದಲ್ಲಿ ವಾಸವಿದ್ದೆ. ನಾನು ನೌಕರಿಯಲ್ಲಿದ್ದಾಗ ಊರಿಗೆ ಬಂದಾಗ ದವಸ, ಧಾನ್ಯ ತೆಗೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 8 ರಿಂದ 16 ರ ಆಸ್ತಿಗಳನ್ನು ಖರೀದಿಸಿರುವ ಕ್ರಯ ಪತ್ರಗಳಲ್ಲಿ ನನ್ನ ತಂದೆಯ ಹೆಸರಿನಲ್ಲಿ ಆರ್.ಟಿ.ಸಿ., ಇರುವ ಕಾರಣ ನನ್ನ ವೇತನದಿಂದ ಬಂದ ಹಣದಲ್ಲಿ ನನ್ನ ತಂದೆ ಹೆಸರಿನಲ್ಲಿ ಖರೀದಿಸುತ್ತಿರುವುದಾಗಿ ಬರೆದಿಲ್ಲ. ಸದರಿ ಆಸ್ತಿಗಳನ್ನು ಖರೀದಿಸುವ ಕಾಲಕ್ಕೆ ನನಗೆ

ಎಷ್ಟು ವೇತನ ಬರುತ್ತಿತ್ತು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಕುಟುಂಬದ ನಿರ್ವಹಣೆಗೆ ಎಷ್ಟು ಹಣ ಖರ್ಚಾಗುತ್ತಿತ್ತು ಎಂದು ಹೇಳಲು ಆಗುವುದಿಲ್ಲ.

ನಾನು ಪಿಯುಸಿ ಓದಿದ್ದೇನೆ. ನನ್ನ ತಂದೆ ಮತ್ತು ಸಹೋದರರು ದುಡಿದು ನನ್ನ ವಿದ್ಯಾಭ್ಯಾಸದ ಖರ್ಚುಗಳನ್ನು ಮಾಡಿದ್ದಾರೆ ಎಂದರೆ ನನ್ನ ತಂದೆ ಮಾತ್ರ ನನ್ನ ವಿದ್ಯಾಭ್ಯಾಸದ ಖರ್ಚು ಮಾಡಿದ್ದಾರೆ ನನ್ನ ಸಹೋದರರು ಮಾಡಿಲ್ಲ. ವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆ ಇರುವುದಿಲ್ಲ. ವಾದಿಗೆ ಬರಬೇಕಾದ ಭಾಗಾಂಶ ಕೊಡಲು ತೊಂದರೆ ಇದೆಯೇ ಎಂದರೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಭಾಗಾಂಶ ಕೊಡಲು ತೊಂದರೆ ಇಲ್ಲ ನಾನು ಖರೀದಿಸಿರುವ ಆಸ್ತಿಗಳಲ್ಲಿ ಭಾಗಾಂಶ ಕೊಡುವುದಿಲ್ಲ. ನನ್ನ ತಾತನಿಂದ ನನ್ನ ತಂದೆಯ ಹೆಸರಿಗೆ ಬಂದಿದ್ದ 10 ಎಕರೆ ಜಮೀನಿನಲ್ಲಿ ದುಡಿದು ಸಂಪಾದಿಸಿದ ಹಣದಿಂದ ದಾವಾ ಐಟಂ ನಂಬರ್ 8 ರಿಂದ 16 ರ ಆಸ್ತಿಗಳನ್ನು ಖರೀಸಲಾಗಿದೆಯೇ ವಿನಃ ನನ್ನ ವೇತನದ ಹಣದಿಂದ ಖರೀದಿಸಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಗಳು ಮತ್ತು ಮರೂರು ಗ್ರಾಮದಲ್ಲಿರುವ ಆಸ್ತಿಗಳಲ್ಲಿ ವಾದಿಗೆ ಭಾಗಾಂಶ ಇದೆ ಎಂದರೆ ಅವರು ತಂದೆ ಇದ್ದಾಗ ತೆಗೆದುಕೊಳ್ಳಬೇಕಾಗಿತ್ತು.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**